ಮೆಟ್ಟಿಲಿನ ಕಟಾಂಜನದಗುಂಟ ಕೆಳಗಿಳಿದವು. ಕಿರಿದಾದ ಓಣಿಗಳಲ್ಲಿ ಕೊಂಬೆಗಳು ಛಾವಣಿಗಳನ್ನು ಒಂದಕ್ಕೊಂದು ಕೂಡಿಸಿದ್ದವು. ಗಜಿಬಿಜಿಯಿಂದ ಕೂಡಿದ ನಗರದ ರಸ್ತೆಗಳ ಮೇಲೆ ಅರಣ್ಯದ ಛಾಯೆಯನ್ನು ತಂದವು. ಇದು ಕಳವಳಕ್ಕೆ ಕಾರಣವಾಯಿತು.

ಈ ಅಸಾಮಾನ್ಯವಾದ ಸಸ್ಯ ಸಂಪತ್ತಿನ ಬಗ್ಗೆ ಚರ್ಚಿಸಲು ವಿದ್ವಾಂಸರು, ಪಂಡಿತರು ಒಂದಡೆ ಸೇರಿದರು. ಜನರ ಪವಾಡದ ವಿವಿಧ ಮುಖಗಳನ್ನು ನೋಡಲು ಹೂರಗೆ ಸೇರಿದರು. ಆಶ್ಚರ್ಯಭರಿತ ಉದ್ಗಾರಗಳು, ಚಟುವಟಿಕೆರಹಿತ ಜನರ ಆಶ್ಚರ್ಯದ ಧಾಟಿ ಈ ವಿಚಿತ್ರ ಘಟನೆಗೆ ಒಂದು ಗಾಂಭೀರ್ಯವನ್ನು ತಂದು ಕೊಟ್ಟವು. ಒಮ್ಮಿಂದೊಮ್ಮೆಲೆ ಒಬ್ಬ ಕೂಗಿದ, “ಕಾಡನ್ನು ನೋಡಿ” ಮತ್ತು ನಾವು ಆ ಹಸಿರು ಅರ್ಧವೃತ್ತಾಕಾರದ ಸಮೀಪ ಬಂದಿರುವದನ್ನು ಗಾಬರಿಯೊಂದಿಗೆ ಗಮನಿಸಿದೆವು. ಅರಣ್ಯವು ನಗರದ ಮೇಲೆ ಆಕ್ರಮಣ ಮಾಡುತ್ತಿರುವಂತೆ ತೋರಿತು. ಮುಳ್ಳುಕಂಟಿಗಳು ಬಳ್ಳಿಗಳು ಉಪನಗರದ ಮೊದಲ ಮನೆಗಳ ಮೇಲೆ ಚಾಚಿದವು.

ಈಗ ಅರಣ್ಯ ನಗರಿಯ ಜನರಿಗೆ ಏನಾಗುತ್ತಿದೆಯೆಂಬುದು ಅರಿವು ಮೂಡಿತು ಮತ್ತು ಹೆದರಿಕೆ ಉಂಟಾಯಿತು. ಅರಣ್ಯವು ನದಿಯ ಹತ್ತಿರದ ತನ್ನ ಪ್ರದೇಶವನ್ನು ಮರಳಿ ಪಡೆಯತೊಡಗಿತ್ತು. ಕತ್ತರಿಸಲ್ಪಟ್ಟ ಚೆಲ್ಲಾಪಿಲ್ಲಿಯಾದ ಸಂಸ್ಕರಿಸಿದ ಮರಗಳು ಮುಂದೆ ಹೋಗಲು ತಮ್ಮನ್ನು ತಾವು ಬಂಧಮುಕ್ತಗೊಳಿಸಿಕೊಳ್ಳತೊಡಗಿದವು. ಈ ಆಕ್ರಮಣವನ್ನು ತಡೆಯುವುದಾದರೆ ಹೇಗೆ? ಬೆಂಕಿಯನ್ನು ಉಪಯೋಗಿಸಿದರೆ ಅದು ಇಡೀ ನಗರವನ್ನೇ ಸುತ್ತುವರೆಯುವ ಅಪಾಯವಿತ್ತು. ಮತ್ತೆಮತ್ತೆ ಮರುಕಳಿಸುತ್ತಿರುವ, ಭೂಮಿಯ ಕೆಳಗಿನಿಂದ ಹಲ್ಲೆ ಮಾಡುತ್ತಿರುವ ದೈತ್ಯಾಕಾರದ

